ರಾಜ್ಯದಲ್ಲಿ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ನಿಲಯಗಳು.

೫೨೧. ಶ್ರೀ ಆರ್. ಎನ್. ನಾಯ್ಕ(ಭಟಕಳ್).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ೧೯೮೩-೮೪, ೧೯೮೪-೮೫ ಹಾಗೂ ೧೯೮೫-೮೬ನೇ ವರ್ಷಗಳಲ್ಲಿ ರಾಜ್ಯದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿರುವ ಸಂಖ್ಯೆ ಎಷ್ಟು ?

ಆ) ಅವುಗಳಿಗೆ ತಗುಲಿದ ವೆಚ್ಚವೆಷ್ಟು ?

ಇ) ಮೇಲೆ ಹೇಳಿದ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಸ್ಥಾಪಿಸಲಾಗಿದೆ ?

ಶ್ರೀ ವಿ. ಎಲ್. ಪಾಟೀಲ್(ಸಮಾಜ ಕಲ್ಯಾಣ ಸಚಿವರು).—

ಅ) ೧೯೮೩-೮೪ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರಾರಂಭಿಸಿಲ್ಲ. ೧೯೮೪-೮೫ನೇ ಸಾಲಿನಲ್ಲಿ ೨೫ ಮತ್ತು ೧೯೮೫-೮೬ನೇ ಸಾಲಿನಲ್ಲಿ ೨ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ.

ಆ) ೨೫ ವಿದ್ಯಾರ್ಥಿನಿಲಯಗಳಿಗೆ ರೂ. ೫,೦೨ ೩೫೦-೦೦ ಮತ್ತು ೨ ವಿದ್ಯಾರ್ಥಿನಿಲಯಗಳಿಗೆ ರೂ. ೮೨,೮೦೦-೦೦.

ಇ) ಈ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರಾರಂಭಿಸಿಲ್ಲ.

ಶ್ರೀ ಆರ್. ಎನ್. ನಾಯಕ್.—೧೯೮೩-೮೪ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸದೇ ಇರುವುದಕ್ಕೆ ಕಾರಣ ಏನು. ೧೯೮೩-೮೪ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳಿಗೆ ಬೇಡಿಕೆ ಇರಲಿಲ್ಲವೇ ? ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುವುದರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದೀರಾ ? ಉತ್ತರ ಕನ್ನಡ ಜಿಲ್ಲೆಯಿಂದ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುವುದಕ್ಕೆ ನಿಮ್ಮ ಮುಂದೆ ಬೇಡಿಕೆ ಇತ್ತೋ ಇಲ್ಲವೋ ತಿಳಿಸಿ.

ಶ್ರೀ ವಿ ಎಲ್, ಪಾಟೀಲ್.—ಈಗ ಬೇರೆ ಬೇರೆ ಜಿಲ್ಲಾಧಿಕಾರಿಗಳಿಂದ ಬಂದಂತಹ ವರದಿಗಳನ್ನು ಪರಿಶೀಲನೆ ಮಾಡಿ, ಹಣ ಇದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುತ್ತೇವೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಇವರು ಕೊಟ್ಟಿರುವ ಉತ್ತರ ಸರಿಯಾಗಿದೆಯೆಂದು ನೀವು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ನಾನು ಕೇಳಿದ್ದು ೧೯೮೩-೮೪ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸದಿರುವಿಕೆಗೆ ಕಾರಣ ಏನು ? ಒಂದೊಂದಾಗಿ ಕೇಳುತ್ತೇನೆ ಉತ್ತರ ಕೊಡುತ್ತೀರಾ ?

ನಾನು ಕೇಳಿದ್ದು, ೧೯೮೩-೮೪ ರಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸದೆ ಇರುವುದಕ್ಕೆ ಕಾರಣ ಏನು ? ಅಥವಾ ೧೯೮೩-೮೪ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸದೇ ಇರುವುದಕ್ಕೆ ಬೇಡಿಕೆ ಇರಲಿಲ್ಲವೆ ?

ಶ್ರೀ ವಿ. ಎಲ್. ಪಾಟೀಲ್.—ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಅಧಿಕಾರಿಗಳಿಂದ, ರೆಕಮೆಂಡೇಷನ್ ಬಂದಿರಲಿಲ್ಲ.

ಶ್ರೀ ಆರ್. ಎನ್. ನಾಯಕ್.—ನಾನು ಕೇಳಿದ್ದಕ್ಕೆ ಇದು ಉತ್ತರವೇ ! ೧೯೮೩-೮೪ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸದೇ ಇರುವುದಕ್ಕೆ ಬೇಡಿಕೆ ಇರಲಿಲ್ಲವೇ ? ಅಥವಾ ನಿಮ್ಮ ಹತ್ತಿರ ದುಡ್ಡು ಇರಲಿಲ್ಲವೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಕೇಳಿರುವ 'ಎ' ಪ್ರಶ್ನೆಯು ಇಡೀ ಸ್ಟೇಟ್‌ಗೆ ಸಂಬಂಧಪಟ್ಟ ಪ್ರಶ್ನೆ. 'ಸಿ' ಪ್ರಶ್ನೆಯು ಬರೀ ಉತ್ತರ ಕನ್ನಡ ಜಿಲ್ಲೆಗೆ ಮಾತ್ರ ಸಂಬಂಧ

ಪಟ್ಟದ್ದು. ಇಡೀ ರಾಜ್ಯದಲ್ಲಿ ಎಷ್ಟು ಪೋಸ್ಟ್ ಮೆಟ್ರಿಕ್ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿದ್ದೀರಾ ಎಂಬ ಬಗ್ಗೆ ಅಂಕಿ ಸಂಖ್ಯೆಗಳನ್ನು ಕೇಳಿದ್ದಾರೆ ಮತ್ತು ಎಕ್ಸಪೆಂಡೇಚರ್ ಬಗ್ಗೆ ಹೇಳಿದ್ದಾರೆ.

ಶ್ರೀ ವಿ. ಎಲ್. ಪಾಟೀಲ್.—೧೯೮೪-೮೫ ರಲ್ಲಿ ೨೫ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ೧೯೮೫-೮೬ ರಲ್ಲಿ ೨ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—೧೯೮೫-೮೬ನೇ ಸಾಲಿನಲ್ಲಿ ೨ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿದ್ದೇವೆಂದರೆ ಹೇಗೆ ? ಅಧಿಕಾರಿಗಳಿಗೂ ಮತ್ತು ಜನರಿಗೂ ಸಂಪರ್ಕ ಇಲ್ಲವೇ? ನೀವು ಹಿಂದುಳಿದ ಜನಾಂಗಕ್ಕೆ ಸೇರಿದವರೆಂದು ತಿಳಿದು ಸಮಾಜ ಕಲ್ಯಾಣ ಇಲಾಖೆಗೆ ಮಂತ್ರಿಪರ್ಯಾಯವನ್ನಾಗಿ ಮಾಡಿದ್ದಾರೆ. ಈ ವರ್ಷ ಬರೀ ೨ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿರುವುದು ಸರಿಯೇ ?

ಶ್ರೀ ವಿ. ಎಲ್. ಪಾಟೀಲ್.—ನಮ್ಮ ರಾಜ್ಯದಲ್ಲಿ ಎಸ್.ಸಿ. ಮತ್ತು ಎಸ್.ಟಿ ಜನಾಂಗದವರ ಹಾಸ್ಟೆಲ್‌ಗಳು ೯೦ ಇವೆ. ಹಿಂದುಳಿದ ಜನಾಂಗದವರ ಹಾಸ್ಟಲ್‌ಗಳು ೬೫ ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಡೀ ರಾಜ್ಯದಲ್ಲಿ, ೩ ವರ್ಷಗಳಿಂದೀಚೆಗೆ ಎಷ್ಟು ಪೋಸ್ಟ್ ಮೆಟ್ರಿಕ್ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿದ್ದೀರಿ ಎಂದರೆ ನೀವು ಏನೇನೋ ಹೇಳುತ್ತೀರಿ.

ಶ್ರೀ ವಿ. ಎಲ್. ಪಾಟೀಲ್.—೧೯೮೪-೮೫ ರಲ್ಲಿ ೨೫ ಹಾಸ್ಟೆಲ್‌ಗಳನ್ನು ಕಟ್ಟಿದ್ದೇವೆ ೧೯೮೫-೮೬ ರಲ್ಲಿ ೨ ಹಾಸ್ಟಲ್‌ಗಳನ್ನು ಕಟ್ಟಿದ್ದೇವೆಂದು ನಾನು ಆಗಲೇ ಹೇಳಿದ್ದೇನಲ್ಲಾ.

ಅಧ್ಯಕ್ಷರು.—ಮಾನ್ಯ ನಾಯಕ್ ಅವರೇ ನಿಮಗೆ ಐದಾರು ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಆರ್. ಎನ್. ನಾಯಕ್.—೧೯೮೫-೮೬ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ಬಗ್ಗೆ ಕೇಳಿರುವುದಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ, ಅರ್ಧ ಗಂಟೆ ಕಾಲ ಬೇಕಾದರೆ ಚರ್ಚೆ ನಡೆಯಲಿ.

ಶ್ರೀ ವಿ. ಎಲ್. ಪಾಟೀಲ್.—೧೯೮೩-೮೪ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿಲ್ಲ. ೧೯೮೩-೮೪ ರಲ್ಲಿ ೨೫ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದೆ ಎಂದು ಹೇಳಿದ್ದೇನೆ. ೧೯೮೫-೮೬ ರಲ್ಲಿ ೨ ವಿದ್ಯಾರ್ಥಿನಿಲಯಗಳು ಎಂದು ಹೇಳಿದ್ದೇನೆ. ನಾನು ಹಾಸ್ಟಲುಗಳನ್ನು ಹೇಳುತ್ತಿದ್ದೇನೆ. ಕಟ್ಟಡಗಳ ಬಗ್ಗೆ ತಾವು ಕೇಳಿಲ್ಲ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ,.....

ಅಧ್ಯಕ್ಷರು.—ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ...

ಶ್ರೀ ಆರ್. ಎನ್. ನಾಯಕ್.—ನಾನು ಕ್ಲಿಯರ್ ಆಗಿ ಕೇಳಿದ್ದೇನೆ. ದಯವಿಟ್ಟು ಸ್ವಲ್ಪ ಕೇಳಿ ೧೯೮೫-೮೬ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳನ್ನು ಮಾಡದೇ ಇರುವುದಕ್ಕೆ ಕಾರಣ ಹೇಳಿಲ್ಲ, ಕಾರಣ ಏನು ? ಏಕೆ ಪ್ರಾರಂಭಿಸಿಲ್ಲ ? ಬೇಡಿಕೆ ಇಲ್ಲವೇ.

ಅಧ್ಯಕ್ಷರು —ದಯವಿಟ್ಟು ತಾವು ಕುಳಿತುಕೊಳ್ಳಿ. ನೀವು ಬೇಕಾದರೆ ಅರ್ಧ ಗಂಟೆ ಚರ್ಚೆಗೆ ನೋಟೀಸ್ ಕೊಡಿ ಎಂದು ಹೇಳಿದ್ದೇನೆ. ನೀವು ಇನ್ನೂ ಮಾತನಾಡುತ್ತಿದ್ದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

ರಾಜ್ಯದಲ್ಲಿನ ಗ್ರಾಮಾಂತರ ದನಗಳ ಮೇವಿಗಾಗಿ ಇರುವ ಅರಣ್ಯದ ಬಗ್ಗೆ.

೧೧೮. ಶ್ರೀ ಮಹಮದ್ ಮೊಯಿನುದ್ದೀನ್.—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ ಮತ್ತು ೮೫ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಮತ್ತು ಇತರ ಜನರಿಗಾಗಿ ಸೌದೆ, ಸೊಪ್ಪಿನ ಗೊಬ್ಬರಕ್ಕಾಗಿ ಮತ್ತು ದನಗಳ ಮೇವಿಗಾಗಿ ಎಷ್ಟು ಅರಣ್ಯ ಪ್ರದೇಶ ಇತ್ತು?

ಆ) ೧೯೮೫ ಮತ್ತು ೮೫ನೇ ಸಾಲಿನಲ್ಲಿ ರಾಜ್ಯದಲ್ಲಿ ಇದ್ದಂತಹ ಅರಣ್ಯ ಪ್ರದೇಶದ ವಿಸ್ತೀರ್ಣ ತಿಳಿಸಿರಿ ?